# ಕರ್ನಾಟಕ ವಿಧಾನ ಪರಿಷತ್ತು

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಆರ್.ಬಿ. ತಿಮ್ಮಾಪುರ ಹಾಗೂ ಇತರರು 72 ನೇ ನಿಯಮದ ಮೇರೆಗೆ ನೀಡಿರುವ ಗಮನ ಸೆಳೆಯುವ ಸೂಚನೆಗೆ ಸರ್ಕಾರದ ಉತ್ತರ:-

**ವಿಷಯ:** ಕರ್ನಾಟಕದಲ್ಲಿನ ಜನರು ಹಲವು ದಶಕಗಳ ಹಿಂದೆ ಉದ್ಯೋಗವನ್ನು ಅರಸಿ ನಮ್ಮ ಪಕ್ಕದ ರಾಜ್ಯವಾದ ಗೋವಾಗೆ ವಲಸೆ ಹೋಗಿದ್ದು, ಅಲ್ಲಿ ಕೆಲವೊಂದು ಕಾರ್ಖಾನೆಗಳು ಇನ್ನಿತರೆ ಸಂಸ್ಥೆಗಳಲ್ಲಿ ಕೆಲಸವನ್ನು ನಿರ್ವಹಿಸಿಕೊಂಡು ಅವರ ಜೀವನವನ್ನು ನಡೆಸುತ್ತಿರುತ್ತಾರೆ. ಇದರಲ್ಲಿ ಬಹುತೇಕರು ಗೋವಾ ವಿಮೋಚನಾ ಹೋರಾಟದಲ್ಲಿ ಪಾಲ್ಗೊಂಡವರು ಹಾಗೂ 1970-80-90ರ ದಶಕದಲ್ಲಿನ ಹೆಚ್ಚಿನ ಕನ್ನಡಿಗರು ಅಲ್ಲಿನ ಕೈಗಾರಿಕೆ ಮತ್ತು ಅಭಿವೃದ್ಧಿ ಕಾಮಗಾರಿಗಳಲ್ಲಿ ಕೂಲಿಗಳಾಗಿ ದುಡಿಯುತ್ತಿದ್ದು, ಅಲ್ಲೇ ಬದುಕನ್ನು ಕಟ್ಟಿಕೊಂಡು ಇವರುಗಳಿಗೆ ಜನಿಸಿರುವ ಮಕ್ಕಳು ಪೂರ್ಣಗೋವನ್ನರೇ ಆಗಿದ್ದಾರೆ. ಪ್ರಸ್ತುತ ಗೋವಾದಲ್ಲಿ ಕನ್ನಡಿಗರ ಸಂಖ್ಯೆ ಸುಮಾರು 4 ಲಕ್ಷ ಜನರಿದ್ದು, ಇತಂಹ ಕನ್ನಡಿಗರನ್ನು ಗೋವಾ ಸರ್ಕಾರದ ಮಾನವ ವಿರೋದಿ ನಿಲುವಿನಿಂದಾಗಿ ಹಲವು ಬಾರಿ ಸಂಕಷ್ಟ ಆತಂಕ ಸ್ಥಿತಿ ಎದುರಿಸುತ್ತಿರುವ ಈ ಸಮಯದಲ್ಲೇ ವಲಸಿಗರನ್ನು ಹೊರದಬ್ಬಿ ಮೂಲ ಗೋವಾದವರ ಹಿತವನ್ನು ಕಾಪಾಡಲೆಂದು ಹುಟ್ಟಿಕೊಂಡಿರುವ **"ಪೋಗೋ ಆಂದೋಲನಕ್ಕೆ"** ಕನ್ನಡಿಗರು ಅಕ್ಷರಶಃ ತತ್ತರಿಸಿ ಹೋಗಿರುವ ಈ ವಿಷಯವನ್ನು ನಿಯಮ 72ರ ಅಡಿಯಲ್ಲಿ ಸದನದಲ್ಲಿ ಶ್ರೀ ಆರ್.ಬಿ. ತಿಮ್ಮಾಪುರ ಹಾಗೂ ಇತರರು, ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆದಿರುತ್ತದೆ.

**ಉತ್ತರ:** ಕರ್ನಾಟಕದಿಂದ 30-40 ವರ್ಷಗಳ ಹಿಂದೆ ಹಲವು ಜನರು ಉದ್ಯೋಗವನ್ನು ಅರಸಿ ಗೋವಾಕ್ಕೆ ತೆರಳಿ ಅಲ್ಲೆ ನೆಲೆಸಿರುತ್ತಾರೆ. ಇವರೆಲ್ಲರೂ ಗೋವಾದ ರಸ್ತೆ, ಸೇತುವೆ, ಕಾರ್ಖಾನೆ ಹಾಗೂ ಕಟ್ಟಡಗಳಲ್ಲಿ ಕಾರ್ಮಿಕರಾಗಿ ದುಡಿದು ಬದಕನ್ನು ಕಟ್ಟಿಕೊಂಡು ಆ ನೆಲದ ಭಾಷೆ ಮತ್ತು ಸಂಸ್ಕೃತಿ ಮೈಗೂಡಿಸಿಕೊಂಡು ಗೋವಾನ್ನರಾಗಿಯೇ ಬದುಕು ನಡೆಸುತ್ತಿದ್ದಾರೆ.

ಆದರೆ ಕೆಲವು ಜನರು ತಮ್ಮ ಸ್ವಹಿತಾಸಕ್ತಿಗೋಸ್ಕರ, ಸಮಾಜದ ಶಾಂತಿ ಮತ್ತು ಸಾಮಾರಸ್ಯವನ್ನು ಹಾಳುಮಾಡುವ ದುರುದ್ದೇಶದಿಂದ **POGO** ಹೆಸರನಲ್ಲಿ ಸಭೆ ಮತ್ತು ಸಮಾರಂಭ ಆಯೋಜನೆ ಮಾಡುತ್ತಿರುವುದರಿಂದ ಗೋವಾದ ವಾಸ್ಕೋ ಮತ್ತು ಇನ್ನೀತರ ಭಾಗದಲ್ಲಿ ಸ್ಥಳೀಯ ಕನ್ನಡಿಗರಿಗೆ ತೊಂದರೆಯಾಗುತ್ತಿರುವುದು ಗಮನಕ್ಕೆ ಬಂದಿದೆ. ಕೆಲವು ಗೋವನ್ನರು ಮಾಡುತ್ತಿರುವ ದಬ್ಬಾಳಿಕೆಯಿಂದ ಎರಡು ರಾಜ್ಯದ ನಡುವಿನ ಸಂಬಂಧ ಹಾಳಾಗಲಿದೆ. ಅಲ್ಲದೇ ಕರ್ನಾಟಕದಲ್ಲಿಯೂ ಕೂಡ ಬೇರೆ ರಾಜ್ಯದವರು ಹಾಗೂ ಗೋವಾದವರೂ ಕೂಡ ವಾಸವಾಗಿದ್ದು, ಅವರು ಕೂಡ ಅಂತಕದಿಂದ ಬದುಕು ನಡೆಸುವ ಸ್ಥಿತಿ ನಿರ್ಮಾಣವಾಗುತ್ತದೆ.

ಒಕ್ಕೂಟ ವ್ಯವಸ್ಥೆಯಲ್ಲಿ ಯಾರು ಯಾವ ರಾಜ್ಯದಲ್ಲಿ ಬೇಕಾದರು ನೆಲೆಸುವ ಹಾಗೂ ಬದಕು ಕಟ್ಟಿಕೊಳ್ಳುವ ಅವಕಾಶವಿರುತ್ತದೆ. ಸಂವಿಧಾನದ ಆಶಯಗಳ ವಿರುದ್ಧ ಕೆಲ ಗೋವಾನ್ನರು ಗೋವಾ ರಾಜ್ಯದಲ್ಲಿ ಶಾಂತಿ ಹಾಗೂ ಸಾಮರಸ್ಯವನ್ನು ಹಾಳು ಮಾಡಲು ಅವಕಾಶ ನೀಡಬಾರದು. ಅವರ ವಿರುದ್ಧ ನಿಯಮಾನುಸಾರ ಕಾನೂನು ಕ್ರಮ ಕೈಗೊಂಡು ಸಂವಿಧಾನದ ಆಶಯಗಳನ್ನು ಎತ್ತಿಹಿಡಿಯಬೇಕೆಂದು ಅಲ್ಲಿನ ಗೃಹ ಸಚಿವರು ಹಾಗೂ ಮುಖ್ಯಮಂತ್ರಿಗಳಿಗೆ ಕರ್ನಾಟಕ ಸರ್ಕಾರವು ಸನ್ಮಾನ್ಯ ಮುಖ್ಯಮಂತ್ರಿಯವರ ಮೂಲಕ ಮನವರಿಕೆ ಮಾಡಿಕೊಡಲಾಗುವುದು.

ಸಂಖ್ಯೆ: ಕಸಂವಾ 58 ಕೆಓಎಲ್ ಆಕ 2020.

(ಸಿ.ಟಿ.ರವಿ)
ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಹಾಗೂ
ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು